**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.</u>**

**<u>ಉಪಸ್ಥಿತರು</u>**

ಶ್ರೀ ರಘುರಾಮ ಎನ್.ಎಸ್., ಬಿ.ಎ., ಎಲ್‌ಎಲ್‌ಬಿ.,
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ, ತರೀಕೆರೆ.

**<u>ಅಸಲು ದಾವಾ ನಂಃ 250/2015</u>**

**<u>ದಿನಾಂಕಃ 10ನೇ ಆಗಸ್ಟ್ 2016</u>**

**<u>ವಾದಿ</u>** ಃ ನಾಗರಾಜ ಮತ್ತೊಬ್ಬರು

(ಪ್ರತಿನಿಧಿಸಿದವರು ಃಶ್ರೀ. ಟಿ.ಡಿ.ಕೆ., ನ್ಯಾಯವಾದಿಗಳು)

- ವಿರುದ್ಧ -

**<u>ಪ್ರತಿವಾದಿ</u>** ಃ ಶಂಕರ

(ಪ್ರತಿನಿಧಿಸಿದವರು ಃ ಶ್ರೀ ಹೆಚ್.ವಿ.ಎಂ., ನ್ಯಾಯವಾದಿಗಳು)

**--◆--**

**ಅರ್ಜಿದಾರರು ಃ** ನಾಗರಾಜ ಮತ್ತೊಬ್ಬರು

**- ವಿರುದ್ಧ -**

**ಎದುರುದಾರರು ಃ** ಶಂಕರ ಮತ್ತೊಬ್ಬರು

**--♣--**

## :: ಮಧ್ಯಂತರ ಅರ್ಜಿ ಸಂಖ್ಯೆ:-1 ರ ಮೇಲಿನ ಆದೇಶ ::

ಪ್ರಸ್ತುತ ಈ ಮಧ್ಯಂತರ ಅರ್ಜಿ ನಂ.1ನ್ನು ವಾದಿ ಸಿ.ಪಿ.ಸಿ. ಕ್ರಮಾದೇಶ 39 ನಿಯಮ 1 ಮತ್ತು 2 ಸಹವರ್ತಿ ಕಲಂ.151 ರ ಅಡಿಯಲ್ಲಿ ದಾವಾ ಆಸ್ತಿಯ ಕಾನೂನು ಸಮ್ಮತ ಶಾಂತಿಯುತ ಸ್ವಾಧೀನ ಮತ್ತು ಅನುಬೋಗದಲ್ಲಿರುವ ದಾವಾ ಸ್ವತ್ತಿಗೆ ಪ್ರತಿವಾದಿಗಳಾಗಲೀ ಅಥವಾ ಅವರ ವಾರಸುದಾರರಾಗಲೀ, ಏಜೆಂಟರಾಗಲೀ ಇತರ ಯಾವುದೇ ವ್ಯಕ್ತಿಗಳು ಸಹ ವಾದಿಯ ದಾವಾ ಸ್ವತ್ತಿನ ಶಾಂತಿಯುತ ಅನುಬೋಗಕ್ಕೆ ತೊಂದರೆ ನೀಡದಂತೆ ಈ ದಾವೆಯ ಅಂತಿಮ ತೀರ್ಪನ್ನು ನೀಡುವವರೆಗೂ ತಾತ್ಕಾಲಿಕ ನಿರ್ಭಂಧಕಾಜ್ಞೆ ಆದೇಶವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ವಾದಿಯು 1ನೇ ಮಧ್ಯಂತರ ಅರ್ಜಿಗೆ ಪೂರಕವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಈ ದಾವೆಯ ವಸ್ತು ವಿಷಯದ ಬಗ್ಗೆ ತಮಗೆ ಮಾಹಿತಿ ಇವೆ ಎಂದು ಹಾಗೂ ಈ ದಾವೆಯಲ್ಲಿನ 2ನೇ ವಾದಿಯು 1ನೇ ಅರ್ಜಿಗೆ ಪೂರಕವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ 1ನೇ ಪ್ರತಿವಾದಿಯ ಪರವಾಗಿ ಕೂಡ ಪ್ರಮಾಣಪತ್ರವನ್ನು ಸಲ್ಲಿಸಿರುವುದಾಗಿ ಹೇಳಿರುತ್ತಾರೆ. ಮುಂದುವರೆದು, ಈ ಪ್ರಕರಣವನ್ನು ಪ್ರತಿವಾದಿಯ ವಿರುದ್ದ ಶಾಶ್ವತ ನಿರ್ಭಂಧಕಾಜ್ಞೆಯನ್ನು ಕೋರಿ ಸಲ್ಲಿಸಿರುತ್ತಾರೆಂದು ನುಡಿದಿರುತ್ತಾರೆ. ಮುಂದುವರೆದು ತನ್ನ ಪ್ರಮಾಣಪತ್ರದಲ್ಲಿ ದಾವಾ ಅನುಸೂಚಿತ ಎ ಸ್ವತ್ತಿಗೆ ನನ್ನ ಪತಿಯು ನಿರುಪಾಧಿಕ ಮಾಲೀಕರಾಗಿ ಸ್ವಾಧೀನತೆಯನ್ನು ಹೊಂದಿದ್ದು, ನಾವುಗಳೇ ಉಳುಮೆಯನ್ನು ಮಾಡುತ್ತಿದ್ದು, ಸ್ವತ್ತಿನ ಸ್ವಾಧೀನತೆಯನ್ನು ಶಾಂತಿಯುತವಾಗಿ ನಡೆಸಿಕೊಂಡು ಬರುತ್ತಿದ್ದೇವೆಂದು ಹೇಳಿದ್ದು, ದಾವಾ ಅನುಸೂಚಿತ ಸ್ವತ್ತು ಸರ್ವೆ ನಂ12/17 ರೀ ಸರ್ವೆ ನಂ.152 ಹೆಚ್.ರಂಗಾಪುರ ಗ್ರಾಮ, ಕಸಬಾ ಹೋಬಳಿ, ತರೀಕೆರೆ ತಾಲೂಕು ಅದನ್ನು ದಾವಾ ಅನುಸೂಚಿತ ಎ ಸ್ವತ್ತು ಎಂದು, ಮುಂದುವರೆದು ದಾವಾ ಅನುಸೂಚಿತ ಬಿ ಸ್ವತ್ತಿನಲ್ಲಿ 40 ಇಂಟು 50 ಅಡಿಗಳ

ನಿವೇಶನವಾಗಿದ್ದು, ನಿವೇಶನ ಸಂಖ್ಯೆ:171 ಸರ್ವೆ ನಂ.3ರಲ್ಲಿ ಎಂ.ಸಿ.ಹಳ್ಳಿ ತರೀಕೆರೆ ತಾಲೂಕು ಎಂದು ಇದ್ದು, ಅದನ್ನು ದಾವಾ ಅನುಸೂಚಿತ ಬಿ ಸ್ವತ್ತು ಎಂದು ವಿವರಿಸಲಾಗಿದೆ.

3. ಮುಂದುವರೆದು 1ನೇ ವಾದಿಯು ಉಳಿದಂತಹ ಹೆಬ್ಬೆ ಗ್ರಾಮ, ಎನ್.ಆರ್.ಪುರ ತಾಲೂಕು, ಅರಣ್ಯ ಇಲಾಖೆಯವರು ಹೆಬ್ಬೆ ಹಾಗೂ ಇತರ ಹಳ್ಳಿಗಳಿಗೆ ಸೇರಿದ ಜಮೀನನ್ನು ವನ್ಯ ಜೀವಿಗಳ ಸಂರಕ್ಷಣೆ ಸಲುವಾಗಿ ಜಮೀನನ್ನು ಸ್ವಾಧೀನ ಮಾಡಿಕೊಂಡಿದ್ದು, ಅದರಂತೆ ಆ ಪ್ರದೇಶದಲ್ಲಿದ್ದ ಎಲ್ಲಾ ಜನರು ಎಂ.ಸಿ.ಹಳ್ಳಿ, ತರೀಕೆರೆ ತಾಲೂಕಿಗೆ ಸ್ಥಳಾಂತರಿಸಕ್ಕದ್ದು. ಮುಂದುವರೆದು ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು, ಇವರು ಇಲ್ಲಿನ ಜನರಿಗೆ ಎಂ.ಸಿ.ಹಳ್ಳಿಯಲ್ಲಿ ನಿವೇಶನಗಳನ್ನು ಮಂಜೂರು ಮಾಡಿದರು ಅದರಂತೆ ಆದೇಶ ಸಂಖ್ಯೆ:1/2001-02 ದಿನಾಂಕ:10.01.2001ರಂತೆ ಉಪವಿಭಾಗಾಧಿಕಾರಿಗಳ ಆದೇಶ ದಿ:04-10-2001ರಂತೆ ಜಮೀನನ್ನು ಕಂದಾಯ ಅಧಿಕಾರಿಗಳು ವಾದಿಯವರಿಗೆ ನೀಡಿರುತ್ತಾರೆ. ಈ ಮೇಲ್ಕಂಡ ಪ್ರಕಾರವಾಗಿ ದಾವಾ ಅನುಸೂಚಿತ ಎ ಮತ್ತು ಬಿ ಸ್ವತ್ತನ್ನು ಕಂದಾಯ ಇಲಾಖೆಯವರು ವಾದಿಗೆ ನೀಡಿರುತ್ತಾರೆ.

4. ಮುಂದುವರೆದು ಖುಷ್ಕಿ ಜಮೀನಿನ ಸಂಖ್ಯೆ:17 ಸರ್ವೆ ನಂ.12 ಬ್ಲಾಕ್ ನಂ.17ರಲ್ಲಿ ಮತ್ತು ಮುಂದುವರೆದು ದಿ:10-09-2001ರಂದು ಮನೆಗೆ ಸಂಬಂಧಿಸಿದ ಹಕ್ಕುಪತ್ರವನ್ನು ವಿಚಾರಣೆ ಮಾಡಿರುತ್ತಾರೆ. ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಇವರು ವಿತರಣೆ ಮಾಡಿ ಅವುಗಳನ್ನು ಕ್ರಮವಾಗಿ ಎ ಮತ್ತು ಬಿ ಅನಸೂಚಿತ ಸ್ವತ್ತು ಎಂದು ನಮೂದಿಸಿರುತ್ತಾರೆ. ಮುಂದುವರೆದು ಖಾತೆಯು ಎಂ.ಆರ್.ನಂ.5/2001-02ರಂತೆ ರೀ ಸರ್ವೆಯ ನಂತರ ಸರ್ವೆ ನಂ.12ನ್ನು 1 ಮತ್ತು 2 ಎಂದು ಬದಲಾವಣೆ ಮಾಡಿ ಎಂ.ಆರ್.ನಂ.13, 2012-13ರಂತೆ ಪಹಣಿಯನ್ನು ವಾದಿಯವರ ಹೆಸರಿಗೆ ಬದಲಾಯಿಸಿರುತ್ತಾರೆ. ಅಂತೆಯೇ ಮುಂದುವರೆದು ದಾವಾ ಅನುಸೂಚಿತ ಸ್ವತ್ತಿಗೆ ವಾದಿಯರೇ ಕಂದಾಯವನ್ನು ಪಾವತಿಸಿರುತ್ತಾರೆ. ಮುಂದುವರೆದು ದಾವಾ ಅನುಸೂಚಿತ ಸ್ವಾಧೀನವನ್ನು ನೀಡಿದ ದಿನದಿಂದ ವಾದಿಯು ದಾವಾ ಸ್ವತ್ತಿನ ಸ್ವಾಧೀನತೆಯಲ್ಲಿದ್ದು, ಅದನ್ನು ಶಾಂತಿಯುತವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ. ಮುಂದುವರೆದು ತಾನು ದಾವಾ

ಅನುಸೂಚಿತ ಸ್ವತ್ತನ್ನು ಹೊಂದಿದ್ದು, ಅದನ್ನು ಶಾಂತಿಯತವಾಗಿ ಅನುಭವಿಸಿಕೊಂಡು ಬರುತ್ತಿದ್ದು, ನಾನೇ ಉಳುಮೆ ಮಾಡುತ್ತಿದ್ದೇನೆಂದು, ಹಾಗೂ ಅದನ್ನು ಅನುಭವಿಸುತ್ತಿದ್ದೇನೆಂದು ತೋರಿಸಲು ಈ ದಾವೆಯೊಂದಿಗೆ ಛಾಯಾಚಿತ್ರಗಳು, ಹಕ್ಕುಪತ್ರ, ಎಂ.ಆರ್.ದಾಖಲೆ, ಆರ್.ಟಿ.ಸಿ., ಕಂದಾಯ ಪಾವತಿ ರಶೀದಿಗಳನ್ನು ಪಾವತಿಸಿದ್ದು, ಅವುಗಳನ್ನು ಪರಿಗಣಿಸುವಂತೆ ಹಾಗೂ ಅವುಗಳಿಂದ ಯಾವುದೇ ಅನುಮಾನವಿಲ್ಲದೇ ಹಾಗೂ ವಾದಿಯು ದಾವಾ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿದ್ದು ಅನುಭವಿಸಿಕೊಂಡು ಬರುತ್ತಿದ್ದಾನೆಂದು ತೋರಿಸಿರುತ್ತಾರೆ.

5. ಮುಂದುವರೆದು ಪ್ರತಿವಾದಿಯು 1ನೇ ವಾದಿಯ ಸಹೋದರನಾಗಿದ್ದು, ಪ್ರತಿವಾದಿ ಹಾಗೂ 1ನೇ ವಾದಿಯ ಪೋಷಕರು ಬಹಳ ಹಿಂದೆಯೇ ಹೆಬ್ಬೆ ಗ್ರಾಮದಲ್ಲಿ ನಿಧನರಾಗಿರುತ್ತಾರೆಂದು ಆ ಕಾರಣದಿಂದಾಗಿ ಪ್ರತಿವಾದಿಯು ಹೆಬ್ಬೆ ಗ್ರಾಮವನ್ನು ತೊರೆದಿದ್ದನು ಎಂದು, ಮುಂದುವರೆದು ತನ್ನ ಅಜ್ಜಿಯ ಮನೆಯಲ್ಲಿ ಮಂಗಳೂರಿನಲ್ಲಿ ವಾಸಿಸುತ್ತಿದ್ದು, ಅಲ್ಲಿಯೇ ಉಳಿದಿದ್ದೆನು ಎಂದು ಹೇಳಿದ್ದಾರೆ. ಮುಂದುವರೆದು ಪ್ರತಿವಾದಿಗೆ ಹೆಬ್ಬೆ ಗ್ರಾಮದಲ್ಲಿ ಯಾವುದೇ ಆಸ್ತಿ ಇರುವುದಿಲ್ಲವೆಂದು, ಆತನು ತನ್ನ ಅಜ್ಜಿ ಭದ್ರಮ್ಮನ ಮನೆಯಲ್ಲಿ ವಾಸಿಸುತ್ತಿದ್ದಾನೆಂದು, ಮುಂದುವರೆದು ನಾವುಗಳು ಮಾತ್ರ ಹೆಬ್ಬೆ ಗ್ರಾಮದಲ್ಲಿ ಇದ್ದು, ನಂತರ ಎಂ.ಸಿ.ಹಳ್ಳಿಗೆ ಬಂದು ನೆಲೆಸಿ ಇಲ್ಲಿ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಂದ ಬಂದಂತಹ ಆಸ್ತಿಯನ್ನು ಹೊಂದಿದ್ದೇವೆಂದು ನುಡಿದಿರುತ್ತಾರೆ.

6. ಮುಂದುವರೆದು ದಾವಾ ಆಸ್ತಿಯು ಸ್ವಯಾರ್ಜಿತವಾದಂತಹ ಸ್ವತ್ತು ಎಂದು ನಾವು ಅದನ್ನು ಅನುಭವಿಸಿಕೊಂಡು ಬರುತ್ತಿದ್ದೇವೆಂದು, ಈ ಕುರಿತಾಗಿ ಎಲ್ಲಾ ಕಂದಾಯ ದಾಖಲೆಗಳು 1ನೇ ವಾದಿ ಮತ್ತು ನನ್ನ ಹೆಸರಿನಲ್ಲಿ ನಮೂದಿಸಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಮುಂದುವರೆದು ದಾವಾ ಅನುಸೂಚಿತ ಸ್ವತ್ತಿನ ಕುರಿತಾಗಿ ಪ್ರತಿವಾದಿಗೆ ಯಾವುದೇ ಹಕ್ಕು, ಹಿತಾಸಕ್ತಿ ಇರುವುದಿಲ್ಲವೆಂದು ಹಾಗಿದ್ದಾಗಿಯೂ ಕೂಡ ದಿ:02-08-2015 ರಂದು ಪ್ರತಿವಾದಿಯು ದಾವಾ ಅನುಸೂಚಿತ ಸ್ವತ್ತಿನ ಬಳಿ ಬಂದು ಕಿರುಕುಳ ನೀಡುತ್ತಿದ್ದಾನೆಂದು, ಅಂತೆಯೇ

ಮುಂದುವರೆದು ದಾವಾ ಅನುಸೂಚಿತ ಸ್ವತ್ತಿನ ಅನುಭೋಗವನ್ನು ಶಾಂತಿಯುತವಾಗಿ ಅನುಭವಿಸಲು ತೊಂದರೆ ನೀಡುತ್ತಿದ್ದಾರೆಂದು, ಹಾಗೂ ದಾವಾ ಅನುಸೂಚಿತ ಸ್ವತ್ತಿಗೆ ಅಕ್ರಮವಾಗಿ ಪ್ರವೇಶ ಮಾಡಲು ಪ್ರಯತ್ನಿಸಿರುತ್ತಾರೆಂದು ನುಡಿದಿರುತ್ತಾರೆ.

7. ಮುಂದುವರೆದು ನಾವುಗಳು ಪ್ರತಿವಾದಿಯ ಕಾನೂನು ಬಾಹಿರ ಚಟುವಟಿಕೆಗಳನ್ನು ಎದುರಿಸಲು ಸಾಧ್ಯವಿಲ್ಲವೆಂದು, ಅಂತೆಯೇ ಮುಂದುವರೆದು ನಾವು ಹಾಗೂ ನಮ್ಮ ಹಿತೈಶಿಗಳು ಸೇರಿ ಪ್ರತಿವಾದಿಯ ಕಾನೂನು ಬಾಹಿರ ಚಟುವಟಿಕೆಗಳನ್ನು ತಡೆದಿದ್ದೆವು ಎಂದು, ಮುಂದುವರೆದು ಪ್ರತಿವಾದಿಯು ಮತ್ತೊಮ್ಮೆ ಬಂದು ದಾವಾ ಸ್ವತ್ತಿಗೆ ತೊಂದರೆ ನೀಡುವಂತಹ ಸಾಧ್ಯತೆ ಇದೆ ಎಂದು, ಆದ್ದರಿಂದ ಪ್ರತಿವಾದಿಯು ಹಣ ಬಾಹುಳವುಳ್ಳ ಹಾಗೂ ಸಮಾಜ ಬಾಹಿರ ಚಟುವಟಿಕೆಗಳಿಂದ ಕೂಡಿದ ವ್ಯಕ್ತಿಗಳಿಂದ ತೊಂದರೆ ಕೊಡುವ ಉದ್ದೇಶ ಇದೆ ಎಂದು ತಿಳಿದು ಬೇರೆ ಅನ್ಯ ಮಾರ್ಗ ಇಲ್ಲದೇ ತಾನು ಈ ದಾವೆಯನ್ನು ಹೂಡಿರುವುದಾಗಿ, ಮುಂದುವರೆದು ಪ್ರತಿವಾದಿಯು ಕಾನೂನುಬಾಹಿರವಾಗಿ ತನ್ನ ಮೇಲೆ ಗಲಭೆಯನ್ನು ಮಾಡಿ ಒತ್ತಾಯಪೂರ್ವಕವಾಗಿ ದಾವಾ ಸ್ವತ್ತಿನ ಶಾಂತಿಯುತ ಅನುಭೋಗಕ್ಕೆ ತೊಂದರೆ ನೀಡಲು ಪ್ರಯತ್ನಿಸಿದ್ದು ಈ ಕುರಿತಾಗಿ ಹಲವು ಭಾರಿ ಪ್ರಯತ್ನವನ್ನು ಮಾಡಿರುತ್ತಾರೆ. ಅಂತೆಯೇ ಮುಂದುವರೆದು ವಾದಪತ್ರದ ಅಂಶಗಳನ್ನು ಕೂಡ ಈ ಅರ್ಜಿಗೆ ಪೂರಕವಾಗಿ ಪರಿಗಣಿಸುವಂತೆ ಪ್ರಾರ್ಥಿಸಿರುತ್ತಾರೆ.

8. ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸುವುದರಿಂದ ಪ್ರತಿವಾದಿಗೆ ಯಾವುದೇ ರೀತಿಯಾದ ತೊಂದರೆ ಅಥವಾ ಹಾನಿಯುಂಟಾಗುವುದಿಲ್ಲ. ಬದಲಾಗಿ ಈ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಿದರೆ ವಾದಿಗೆ ತುಂಬಲಾರದ ನಷ್ಟವುಂಟಾಗುತ್ತದೆ. ಹಾಗೂ ತುಂಬಲಾರದ ಹಾನಿಯುಂಟಾಗುತ್ತದೆ. ವಾದಿಯು ಈ ದಾವೆಯನ್ನು ತನ್ನ ಪರವಾಗಿ ತೀರ್ಪನ್ನು ಪಡೆಯಲು ಉತ್ತಮವಾದಂತಹ ದಾವೆಯಾಗಿದ್ದು, ಮೇಲ್ನೋಟಕ್ಕೆ ಸಾಬೀತುಪಡಿಸುವ ಪ್ರಕರಣವನ್ನು ಹೊಂದಿರುತ್ತಾನೆಂದು, ಅಲ್ಲದೆಯೇ ವಾದಿಯು ತನ್ನ ಪರವಾಗಿ ಅನುಕೂಲತೆಯ ಸಮತೋಲನ

ಹೊಂದಿರುತ್ತಾನೆ. ಹಾಗೂ ಒಂದೊಮ್ಮೆ ಈ ಅರ್ಜಿಯನ್ನು ಪರಿಗಣಿಸದಿದ್ದಲ್ಲಿ ವಾದಿಗೆ ತುಂಬಲಾರದ ನಷ್ಟವುಂಟಾಗುತ್ತದೆ. ವಾದಿಯು ತನ್ನ 1ನೇ ಮಧ್ಯಂತರ ಅರ್ಜಿಗೆ ಪೂರಕವಾದ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪರಿಗಣನೆಗೆ ತೆಗೆದುಕೊಂಡು 1ನೇ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸಿಕೊಂಡಿರುತ್ತಾರೆ.

9. ಪ್ರಸ್ತುತ ಪ್ರಕರಣದಲ್ಲಿ ಪ್ರತಿವಾದಿಯು ತನ್ನ ಪರ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದು, ವಾದಿಯ ವಾದಪತ್ರಕ್ಕೆ ಪ್ರತಿವಾದಪತ್ರವನ್ನು ಸಲ್ಲಿಸಿದ್ದು, ಪ್ರತಿವಾದಪತ್ರವನ್ನೇ 1ನೇ ಮಧ್ಯಂತರ ಅರ್ಜಿಗೆ ಆಕ್ಷೇಪಣೆಯನ್ನಾಗಿ ಪರಿಗಣಿಸುವಂತೆ ಪ್ರಾರ್ಥಿಸಿಕೊಂಡಿರುತ್ತಾರೆ.

10. ಪ್ರತಿವಾದಿಯು ತನ್ನ ಪ್ರತಿವಾದಪತ್ರದಲ್ಲಿ ವಾದಪತ್ರದಲ್ಲಿ ಹೇಳಿರುವ ಅಂಶಗಳನ್ನು ನಿರಾಕರಿಸಿದ್ದು, ಅವುಗಳನ್ನು ವಾದಿಯೇ ರುಜುವಾತುಪಡಿಸಬೇಕೆಂದು ಹೇಳಿರುತ್ತಾರೆ. ಮುಂದುವರೆದು ವಾದಿ ಮತ್ತು ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ದಾವಾ ಸದಸ್ಯರಾಗಿರುತ್ತಾರೆ. ದಾವಾ ಆಸ್ತಿಯು ಮೂಲತಃ ಪ್ರತಿವಾದಿಯ ಅರ್ಜಿಯಾದ ಭದ್ರಮ್ಮ ಕೋಂ ಸಿದ್ರಾಮಯ್ಯಗೌಡರವರಿಗೆ ಸೇರಿದ್ದು, ಭದ್ರಮ ಕೋಂ ಸಿದ್ರಾಮಯ್ಯರವರಿಗೆ ಎರಡು ಗಂಡು ಮಕ್ಕಳು, 4 ಹೆಣ್ಣು ಮಕ್ಕಳಿರುತ್ತಾರೆ. ಅವರುಗಳೆಂದರೆ 1ನೇ ದೇವಮ್ಮ, 2ನೇ ಬೊಮ್ಮಮ್ಮ, 3ನೇ ನಿಂಗಮ್ಮ, 4ನೇ ಪುಟ್ಟಮ್ಮ ಮತ್ತು ಗಂಡು ಮಕ್ಕಳಾದ ಸಿದ್ದಪ್ಪ ಹಾಗೂ ಗಂಗಪ್ಪ ಮಕ್ಕಳಿರುತ್ತಾರೆ. ಸದರಿ ದೇವಮ್ಮ, ಬೊಮ್ಮಮ್ಮ ಮತ್ತು ನಿಂಗಮ್ಮ ಪ್ರತಿವಾದಿಗೆ ದೊಡ್ಡಮ್ಮನಾಗಿರುತ್ತಾರೆ. ನಿಂಗಮ್ಮ ಪೌತಿಯಾಗಿದ್ದು, ಮಂಜುನಾಥ ಮತ್ತು ಸುಮಿತ್ರ ಇವರು ಅವರ ಮಕ್ಕಳಾಗಿರುತ್ತಾರೆ. ಪುಟ್ಟಮ್ಮ ಪ್ರತಿವಾದಿಯ ತಾಯಿಯಾಗಿದ್ದು, ಅವರು ಸಹ ಪೌತಿಯಾಗಿದ್ದು, ವಾದಿ ಮತ್ತು ಪ್ರತಿವಾದಿ ಅವರ ಮಕ್ಕಳಾಗಿರುತ್ತಾರೆ. ಸಿದ್ದಪ್ಪ ಪೌತಿಯಾಗಿದ್ದು, ಸಿದ್ದಪ್ಪನ ಕಾನೂನುಬದ್ದ ವಾರಸುದಾರರಾಗಿ ಅವರ ಹೆಂಡತಿ ರಾಜೇಶ್ವರಿ, ಮಕ್ಕಳಾದ ದಿವಾಕರ್, ಮೋಹನ್, ಚಂದ್ರ, ರತ್ನ ಇವರು ಮಕ್ಕಳಾಗಿರುತ್ತಾರೆ. ಗಂಗಪ್ಪ ಪೌತಿಯಾಗಿದ್ದು, ಸದರಿ

ಗಂಗಪ್ಪನವರ ಕಾನೂನುಬದ್ದ ವಾರಸುದಾರರಾಗಿ ಹೆಂಡತಿ ಲಕ್ಷ್ಮಮ್ಮ, ಪರಮೇಶ್ವರ ಮತ್ತು ಮಮತ ಇವರು ಕಾನೂನುಬದ್ದ ವಾರಸುದಾರರಾಗಿರುತ್ತಾರೆ.

11. ಮುಂದುವರೆದು ಭದ್ರಮ್ಮ ಇವರು ಪ್ರತಿವಾದಿಯ ಅಜ್ಜಿಯಾಗಿದ್ದು, ಸದರಿಯವರು ಮೃತಪಟ್ಟಿದ್ದು, ಸದರಿಯವರು ಮೂಲತಃ ಎನ್.ಆರ್.ಪುರ ತಾಲೂಕು, ಹೆಬ್ಬೆ ಗ್ರಾಮದ ವಾಸಿಯಾಗಿದ್ದು, ಸದರಿ ಭದ್ರಮ್ಮನವರಿಗೆ ಸ.ನಂ.50ರಲ್ಲಿ ಹಂಚಿನ ಮನೆ, ಹುಲ್ಲಿನ ಬಚ್ಚಲು ಮನೆ ಹಾಗೂ ಒಂದು ತೆಂಗಿನ ಮರ, 2 ಹಲಸಿನ ಮರ ಹಾಗೂ 4 ಮಾವಿನಿಂದ ಕೂಡಿದ ಆಸ್ತಿಯಿದ್ದು, ಸದರಿ ಆಸ್ತಿಯನ್ನು ದಿಃ03-12-1997ರಂದು ಭದ್ರಾ ವನ್ಯ ಜೀವಿ ವಿಭಾಗ, ಚಿಕ್ಕಮಗಳೂರು ಇವರು ಭದ್ರಾ ಅಭಯಾರಣ್ಯ ಪ್ರಯುಕ್ತ ಹೆಬ್ಬೆ ಗ್ರಾಮದ ಜಮೀನುಗಳಲ್ಲಿ ಒಟ್ಟು 48 ಖಾತೆದಾರರ ಜಮೀನುಗಳು ಮತ್ತು ಕಟ್ಟಡಗಳು ಬಾವಿ ಮನೆ ಇತ್ಯಾದಿ ಇರುವ ಆಸ್ತಿಗಳನ್ನು ಸಹಾ ಭದ್ರಾ ಅಭಯಾರಣ್ಯ ವನ್ಯ ಜೀವಿ ಸಂರಕ್ಷಣಾ ಯೋಜನೆಯಡಿ ಭೂ ಸ್ವಾಧೀನ ಮತ್ತು ಪುನರ್ ಸ್ಥಾಪನೆ ಯೋಜನೆಯಲ್ಲಿ ದಿಃ03-12-1997ರಂದು ಮಹಜರ್ ಕ್ರಮ ಜರುಗಿಸಿ ಮೇಲ್ಕಂಡ ಅಸ್ತಿಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ. ಆ ಬಾಬ್ತು ಮಾನ್ಯ ಉಪವಿಭಾಗಾಧಿಕಾರಿಗಳ ಆದೇಶದ ದಿಃ04-10-2001 ರಂತೆ ದಾವಾ ಆಸ್ತಿಗಳನ್ನು ಮತ್ತು 65 ಸಾವಿರ ರೂ. ಪರಿಹಾರ ಹಣವನ್ನು ಮಂಜೂರು ಮಾಡಲಾಗಿರುತ್ತದೆ. ಸದರಿ ಆಸ್ತಿಯನ್ನು ವಶಪಡಿಸಿಕೊಂಡು ಅಲ್ಲಿನ ನಿವಾಸಿಗಳಿಗೆ ಅವರು ವಾಸವಾಗಿದ್ದ ಮನೆ ಮತ್ತು ಜಮೀನಿನಲ್ಲಿರುವ ಮರಗಳ ಮೌಲ್ಯಮಾಪನ ಮಾಡಿ ವಾದಿಗೆ ಒಟ್ಟು ಕುಟುಂಬದ ಪರವಾಗಿ 65 ಸಾವಿರ ರೂ.ಗಳನ್ನು ಮತ್ತು ಎಂ.ಸಿ.ಹಳ್ಳಿ ಗ್ರಾಮದಲ್ಲಿ ದಾವಾ ಶೆಡ್ಯೂಲ್ ಇವುಗಳನ್ನು ಮಂಜೂರು ಮಾಡಲಾಗಿರುತ್ತದೆ ಎಂದು ನುಡಿದಿರುತ್ತಾರೆ.

12. ಮುಂದುವರೆದು ವಾದಿ ಮತ್ತು ಪ್ರತಿವಾದಿ ತಂದೆಯಾದ ನಿಂಗಪ್ಪ ಹಾಗೂ ತಾಯಿ ಪುಟ್ಟಮ್ಮನವರು ಮೃತಪಟ್ಟ ನಂತರ ಅವರ ಅಜ್ಜಿಯಾದ ಭದ್ರಮ್ಮನವರು ವಾದಿ ಮತ್ತು ಪ್ರತಿವಾದಿಯನ್ನು ಸಾಕಿ ಬೆಳೆಸಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರು ಭದ್ರಮ್ಮನವರಿಗೆ ಸೇರಿದ

ಹೆಬ್ಬೆ ಗ್ರಾಮದ ಮನೆಯಲ್ಲಿ ಭದ್ರಮ್ಮನವರೊಂದಿಗೆ ಅವರು ಮೃತಪಡುವವರೆಗೂ ವಾಸವಾಗಿರುತ್ತಾರೆ. ನಂತರ ಮೇಲ್ಕಂಡಂತೆ ಭದ್ರಮ್ಮನವರಿಗೆ ಸೇರಿದ ಆಸ್ತಿಯನ್ನು ಭದ್ರಾ ಅಭಯಾರಣ್ಯ ವನ್ಯ ಜೀವಿ ಸಂರಕ್ಷಣಾ ಯೋಜನೆಯಡಿ ಭೂ ಸ್ವಾಧೀನಪಡಿಸಿಕೊಂಡ ನಂತರ ನಾಗರಾಜುರವರು ಭದ್ರಮ್ಮನವರ ಪೌತಿ ಖಾತೆ ಮೇರೆಗೆ ತನ್ನ ಹೆಸರಿಗೆ ಭದ್ರಮ್ಮನವರ ಕಾನೂನುಬದ್ದ ವಾರಸುದಾರರಾಗಿ ಪರಿಹಾರ ಹಣವನ್ನು ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ. ಆ ಅರ್ಜಿಯ ಮೇರೆಗೆ ವಾದಿಗೆ ದಾವಾ ಸ್ವತ್ತನ್ನು ಮಂಜೂರು ಮಾಡಲಾಗಿರುತ್ತದೆ. ಮಂಜೂರಾದ ನಂತರ ವಾದಿ ಮತ್ತು ಪ್ರತಿವಾದಿಯರು ಎಂ.ಸಿ.ಹಳ್ಳಿ ಗ್ರಾಮದಲ್ಲಿ ವಾಸ ಮಾಡಿಕೊಂಡು ಜೀವನೋಪಾಯಕ್ಕಾಗಿ ಭತ್ತವನ್ನು ಬೆಳೆದುಕೊಂಡು ಇಂದಿನವರೆಗೂ ಜೀವನ ನಡೆಸುತ್ತಿರುತ್ತಾರೆಂದು ನುಡಿದಿರುತ್ತಾರೆ. ಮುಂದುವರೆದು ಭದ್ರಮ್ಮನವರಿಗೆ ಸೇರಿದ ಹೆಬ್ಬೆ ಗ್ರಾಮದಲ್ಲಿನ ಆಸ್ತಿಯನ್ನು ವಶಪಡಿಸಿಕೊಂಡ ಕಾರಣ ದಾವಾ ಆಸ್ತಿಯು ಮೂಲತಃ ವಾದಿಯು ತನ್ನ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ. ಅಲ್ಲದೇ 65 ಸಾವಿರ ರೂ.ಗಳ ಪರಿಹಾರ ಹಣವನ್ನು ಕುಟುಂಬದ ಪರವಾಗಿ ಪಡೆದಿರುತ್ತಾರೆಂದು ಹೇಳಿರುತ್ತಾರೆ. ಅಂತೆಯೇ ಮುಂದುವರೆದು ವಾದಿ ಮೇಲ್ಕಂಡ ಸತ್ಯಾಂಶಗಳನ್ನು ಮರೆಮಾಚಿ ಸದರಿ ವಾದಿಯು ಸಲ್ಲಿಸಿರುವ ವಾದಪತ್ರದ ಪ್ಯಾರ ನಂ.7ರಲ್ಲಿ ಆಸ್ತಿ ಮೂಲತಃ ತಮ್ಮ ಅಜ್ಜಿಯಾದ ಭದ್ರಮ್ಮನವರಿಗೆ ಸೇರಿದ ಆಸ್ತಿಯನ್ನು ಸರ್ಕಾರದವರು ಭದ್ರಾ ಅಭಯಾರಣ್ಯ ವನ್ಯ ಜೀವಿ ಸಂರಕ್ಷಣಾ ಯೋಜನೆಯಡಿ ಭೂ ಸ್ವಾಧೀನಪಡಿಸಿಕೊಂಡ ಕಾರಣ ಮಂಜೂರಾಗಿರುವುದು ಸ್ವತಃ ತಾವೇ ಒಪ್ಪಿಕೊಂಡಿರುತ್ತಾರೆ. ಆದರೆ ದಾವಾದ ಇತರೆ ಪ್ಯಾರದಲ್ಲಿ ದಾವಾ ಆಸ್ತಿಗಳು ತಮ್ಮ ಸ್ವಯಾರ್ಜಿತ ಆಸ್ತಿಯೆಂದು ತಿಳಿಸಿರುತ್ತಾರೆ.

13. ಮುಂದುವರೆದು ದಾವಾ ಆಸ್ತಿಗಳು ಭದ್ರಮ್ಮ ಕೋಂ ಸಿದ್ರಾಮಯ್ಯನವರಿಗೆ ಸೇರಿದ ಕಾರಣ ಸದರಿಯವರಿಗೆ ಈ ದಾವೆಯ ವಂಶವೃಕ್ಷದಲ್ಲಿ ತಿಳಿಸಿರುವ ಪ್ರತಿವಾದಿಗಳು ಹಾಗೂ ವಾದಿ ಕಾನೂನುಬದ್ದ ವಾರಸುದಾರರಾಗಿದ್ದು, ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾದ ಕಾರಣ ಮೇಲ್ಕಂಡ ವಾದಿ ಮತ್ತು ಪ್ರತಿವಾದಿಯರಿಗೆ ಸಮಾನ ಹಿಸ್ಸೆ ಇರುತ್ತದೆ. ಈ ದಾವಾ ಶೆಡ್ಯೂಲ್

ಸ್ವತ್ತಿನಲ್ಲಿ ಸಮಾನ ಹಕ್ಕು, ಹಿಸ್ಸೆ ಇದ್ದು, ತಮ್ಮ ಹಿಸ್ಸೆಯನ್ನು ನೀಡುವಂತೆ ವಾದಿಗೆ ಹಲವು ಬಾರಿ ತಗಾದೆ ಮಾಡಿದರೂ ಸಹ ವಾದಿ ಹಿಸ್ಸೆಯನ್ನು ಪ್ರತಿವಾದಿಯರಿಗೆ ನೀಡದೇ ದಾವಾ ಆಸ್ತಿಗಳು ತನ್ನ ಸ್ವಯಾರ್ಜಿತ ಆಸ್ತಿಯೆಂದು ತನ್ನ ಪತ್ನಿಯಾದ ಶ್ರೀಮತಿ ಮೀನಾಕ್ಷಿ ಇವರೊಂದಿಗೆ ಸೇರಿಕೊಂಡು ಪ್ರತಿವಾದಿಯ ವಿರುದ್ಧ ಶಾಶ್ವತ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ಮುಂದುವರೆದು ವಾದಿಯು ಹಣಬಲ ಮತ್ತು ತೋಳ್ಬಲಗಳಿಂದ ಪ್ರಭಲರಾಗಿದ್ದು, ನ್ಯಾಯಾಲಯದ ಸಹಾಯವಿಲ್ಲದೇ ಪ್ರತಿವಾದಿಗಳಿಂದ ತಮ್ಮಗಳ ಹಿಸ್ಸೆಯನ್ನು ಪಡೆಯಲು ವಾದಿಗೆ ಸಾಧ್ಯವಿರುವುದಿಲ್ಲ ಆದ್ದರಿಂದ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ 1 ನ್ನು ವಜಾ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

14. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

15. ಮೇಲ್ಕಾಣಿಸಿದ ಸಂಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆ:

## ಅಂಶಗಳು

**1) ವಾದಿ/ಅರ್ಜಿದಾರ ಮೇಲ್ನೋಟಕ್ಕೆ ಸಾಬೀತುಪಡಿಸುವ ಪ್ರಕರಣವನ್ನು ಹೊಂದಿರುತ್ತಾರೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?**

**2) ವಾದಿ/ಅರ್ಜಿದಾರ ತಮ್ಮ ಪರವಾಗಿ ಅನುಕೂಲತೆಯ ಸಮತೋಲನವನ್ನು ಹೊಂದಿರುತ್ತಾರೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?**

**3) ವಾದಿ/ಅರ್ಜಿದಾರ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡದೇ ಹೋದಲ್ಲಿ ತಮಗೆ ತೊಂದರೆ ಹಾಗೂ ಲುಕ್ಸಾನು ಆಗುತ್ತದೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?**

**4) ಹಾಗಾದರೆ ಯಾವ ಆದೇಶ?**

16. ಉಭಯತ್ರರ ವಾದವನ್ನು ಆಲಿಸಲಾಯಿತು.

17. ಮೇಲ್ಕಾಣಿಸಿದ ವಿವಾದಾಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆಃ

ಅಂಶ – 1 ಃ ಸಕಾರಾತ್ಮಕವಾಗಿ,

ಅಂಶ – 2 ಃ ಸಕಾರಾತ್ಮಕವಾಗಿ,

ಅಂಶ – 3 ಃ ಸಕಾರಾತ್ಮಕವಾಗಿ,

ಅಂಶ – 4 ಃ ಅಂತಿಮ ಆದೇಶದಂತೆ.

## ಕಾ ರ ಣ ಗ ಳು

18. **ಅಂಶ–1 ರಿಂದ 3ಃ-** ಈ ಮೂರು ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವುದರಿಂದ ವಿಷಯದ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಇವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

19. ವಾದಿ ದಾವೆಯ ಮೂಲ ಪ್ರಾರ್ಥನೆಯೊಂದಿಗೆ ಪ್ರಸ್ತುತ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ.

20. ಪ್ರಸ್ತುತ ಈ ಮಧ್ಯಂತರ ಅರ್ಜಿ ನಂ.1ನ್ನು ವಾದಿ ಸಿ.ಪಿ.ಸಿ. ಕ್ರಮಾದೇಶ 39 ನಿಯಮ 1 ಮತ್ತು 2 ಸಹವರ್ತಿ ಕಲಂ.151 ರ ಅಡಿಯಲ್ಲಿ ದಾವಾ ಆಸ್ತಿಯ ಕಾನೂನು ಸಮ್ಮತ ಶಾಂತಿಯುತ ಸ್ವಾಧೀನ ಮತ್ತು ಅನುಬೋಗದಲ್ಲಿರುವ ದಾವಾ ಸ್ವತ್ತಿಗೆ ಪ್ರತಿವಾದಿಗಳಾಗಲೀ ಅಥವಾ ಅವರ ವಾರಸುದಾರರಾಗಲೀ, ಏಜೆಂಟರಾಗಲೀ ಇತರ ಯಾವುದೇ ವ್ಯಕ್ತಿಗಳು ಸಹ ವಾದಿಯ ದಾವಾ ಸ್ವತ್ತಿನ ಶಾಂತಿಯುತ ಅನುಬೋಗಕ್ಕೆ ತೊಂದರೆ ನೀಡದಂತೆ

ಈ ದಾವೆಯ ಅಂತಿಮ ತೀರ್ಪನ್ನು ನೀಡುವವರೆಗೂ ತಾತ್ಕಾಲಿಕ ನಿರ್ಭಂಧಕಾಜ್ಞೆ ಆದೇಶವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

21. ವಾದಿಯು ಸಲ್ಲಿಸಿರುವ ವಾದಪತ್ರ, ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದಪತ್ರ, ಮಧ್ಯಂತರ ಅರ್ಜಿ ಹಾಗೂ ವಾದಿಯು ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ವಾದಿಯು ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಗೂ ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು, ಛಾಯಾಚಿತ್ರಗಳಲ್ಲಿ ದಾವಾ ಸ್ವತ್ತಿನಲ್ಲಿ ವಾದಿಯರು ಆಸ್ತಿಯನ್ನು ಕಾಣಬಹುದಾಗಿದೆ. ಮುಂದುವರೆದು ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಜಿಲ್ಲೆ, ಇವರು ದಿ:10-09-2001ರಂದು ಹಕ್ಕುಪತ್ರವನ್ನು ವಿತರಿಸಿದ್ದು, ಅದರಲ್ಲಿ ವಾದಿಯ ಹೆಸರನ್ನು ನಮೂದಿಸಿದ್ದು, ಹೆಚ್.ರಂಗಾಪುರ ಗ್ರಾಮದ ಸರ್ವೆ ನಂ.12ರಲ್ಲಿ 1 ಎಕರೆ ಜಮೀನನ್ನು ಸಾಗುವಳಿಗಾಗಿ ತರೀಕೆರೆ ತಾಲೂಕಿನ ಎಂ.ಸಿ.ಹಳ್ಳಿ, ತರೀಕೆರೆ ತಾಲೂಕಿನ ನಿವೇಶನ ನಂ.171 ರ 40 ಇಂಟು 50 ಅಡಿಗಳ ನಿವೇಶನವನ್ನು ನಾಗರಾಜು ಮತ್ತು 1 ಮತ್ತು 2ನೇ ವಾದಿಯರಿಗೆ ನೀಡಿರುವುದನ್ನು ಗಮನಿಸಬಹುದು. ಮುಂದುವರೆದು ಋಣಭಾರ ನಮೂನೆ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ನಮೂದಾಗಿರುತ್ತದೆ.

22. ಮುಂದುವರೆದು ಹೆಚ್.ರಂಗಾಪುರ ಗ್ರಾಮದಲ್ಲಿ ವಾದಿಗಳಿಗೆ ದಾವಾ ಅನುಸೂಚಿತ ಸ್ವತ್ತು ಮಂಜೂರಾಗಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದು, ಕ್ರಮ ಸಂಖ್ಯೆ:17ರಲ್ಲಿ ವಾದಿಯ ಹೆಸರು ತೋರಿಸಿರುತ್ತದೆ. ಅಂತೆಯೇ ಮುಂದುವರೆದು ಕ್ರಮಾದೇಶ ಸಂಖ್ಯೆ:14, 15, 16ರಲ್ಲಿ ಪ್ರತಿವಾದಿಗಳು ತನ್ನ ಪ್ರತಿವಾದಪತ್ರದಲ್ಲಿ ಹೇಳಿರುವ ವಂಶವೃಕ್ಷದಲ್ಲಿ ನಮೂದಿಸಿರುವ ಹೆಸರುಗಳನ್ನು ತೋರಿಸುತ್ತದೆ. ಮುಂದುವರೆದು ಕ್ರಮಾದೇಶ 26ರಲ್ಲಿ ರಂಗಪ್ಪ ಬಿನ್ ಸಿದ್ರಾಮಯ್ಯರವರ ಹೆಸರುಗಳನ್ನು ತೋರಿಸುತ್ತದೆ. ಮುಂದುವರೆದು ಮ್ಯುಟೇಶನ್ ರಿಜಿಸ್ಟರ್‌ನ್ನು ಹಾಜರುಪಡಿಸಿದ್ದು 5/2001-02ರಲ್ಲಿ ದಿ:04-10-2001 ಹಾಗೂ ಮಾನ್ಯ ಉಪವಿಭಾಗಾಧಿಕಾರಿಗಳು ತರೀಕೆರೆ ಉಪವಿಭಾಗ ತರೀಕೆರೆರವರ ಆದೇಶದ ನಂ.ಎಲ್‌ವಿ.ಕ್ಯೂ 1/99-2000 ದಿ:17-10-2001ರ

ತಹಶೀಲ್ದಾರ್ ತರೀಕೆರೆ ರವರ ಪತ್ರದ ಸಂಖ್ಯೆ:ಎಲ್‌ಎನ್‌ಡಿಸಿಆರ್.44/2001-02 ಈ ಕೆಳಕಂಡಂತೆ ಭೂ ಮಂಜೂರಿಯಂತೆ ಖಾತೆದಾರರ ಹೆಸರನ್ನು ನಮೂದಿಸಿದ್ದು ಅದರಲ್ಲಿ ವಾದಿಯರ ಹೆಸರನ್ನು ಕ್ರಮ ಸಂಖ್ಯೆ:61ರಲ್ಲಿ ತೋರಿಸಿದ್ದು, ಅದರಲ್ಲಿ ನಾಗರಾಜು ಬಿನ್ ಲಿಂಗಪ್ಪ ಎಂದು ನಮೂದಿಸಿರುತ್ತದೆ. ಅಂತೆಯೇ ಮುಂದುವರೆದು ಮೇಲ್ಕಂಡ ದಾಖಲೆಯಲ್ಲಿ ಇದ್ದಂತಹ ರಾಜೇಶ್ವರಿ, ಸಿದ್ದಪ್ಪ, ರಂಗಪ್ಪ, ಸಿದ್ರಾಮಪ್ಪ, ರತ್ನ ಬಿನ್ ಸಿದ್ದಪ್ಪ ಇವರ ಹೆಸರುಗಳನ್ನು ಕೂಡ ಈ ದಾಖಲೆಯಲ್ಲಿ ತೋರಿಸುತ್ತದೆ.

23. ಮುಂದುವರೆದು ಪಹಣಿಯನ್ನು ಹಾಜರುಪಡಿಸಿದ್ದು, ಅದರಲ್ಲಿ ಸರ್ವೆ ನಂ.12/ಪಿ 90ರಲ್ಲಿ 1ನೇ ವಾದಿಯ ಹೆಸರನ್ನು ತೋರಿಸುತ್ತದೆ. ಅಂತೆಯೇ ಮುಂದುವರೆದು ಎಂ.ಆರ್.ನಂ.13, ದಿ:11/10/2001ರಲ್ಲಿ ಹೊಸ ಸರ್ವೆ ನಂಬರ್ ಇರುತ್ತದೆ. ಸ್ವತ್ತುದಾರರು ಮತ್ತು ಅವರ ವಾರಸುದಾರರು ಎಂದು ನಮೂದಿಸಿದ್ದು ಅದರಲ್ಲಿ 1ನೇ ವಾದಿಯು ಹೊಸ ಸರ್ವೆ ನಂ.1, 6 ಎಕರೆ ವಿಸ್ತೀರ್ಣವನ್ನು ಹೊಂದಿರುವುದಾಗಿ ತೋರಿಸುತ್ತದೆ. ಮುಂದುವರೆದು 2015ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದರಲ್ಲಿ ಸರ್ವೆ ನಂ.1 1ನೇ ವಾದಿಗೆ ಸೇರಿದ ಹೆಸರನ್ನು ತೋರಿಸುತ್ತದೆ. ಅಂತೆಯೇ ದಾವಾ ಆಸ್ತಿಗೆ ಸಂಬಂಧಿಸಿದಂತೆ 1ನೇ ವಾದಿಯು ಗ್ರಾಮಪಂಚಾಯ್ತಿಯಲ್ಲಿ ಕಂದಾಯವನ್ನು ಪಾವತಿಸಿದ ಬಗ್ಗೆ ದಾಖಲೆಗಳನ್ನು ಕಾಣಬಹುದಾಗಿದೆ. ಮುಂದುವರೆದು ವಾದಿಯ ಪರ ವಕೀಲರು ಮೆಮೋವನ್ನು ಸಲ್ಲಿಸಿ ಅದರ ಮೂಲಕ ದಿ:25-04-2016 ರಂದು ದಾಖಲೆಗಳನ್ನು ಹಾಜರುಪಡಿಸಿದ್ದು ಅದರಲ್ಲಿ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ನಂ.32/2016ರಲ್ಲಿ ದಾವೆಯನ್ನು ಪ್ರತಿವಾದಿಯು ದಾವೆಯನ್ನು ಹೂಡಿರುವುದಕ್ಕೆ ಕುರಿತಾಗಿ ತೋರಿಸುತ್ತದೆ. ಅದರಲ್ಲಿ ಅಸಲು ದಾವಾ ನಂ.32/2016ಕ್ಕೆ ಸಂಬಂಧಿಸಿದ ವಾದಪತ್ರವನ್ನು ಹಾಜರುಪಡಿಸಿದ್ದು ವಾದಪತ್ರದಲ್ಲಿ ಈ ಪ್ರಕರಣದ ವಾದವನ್ನು ಅಸಲು ದಾವಾ ನಂ.32/2016ರಲ್ಲಿ 14ನೇ ಪ್ರತಿವಾದಿಯನ್ನಾಗಿ ನಮೂದಿಸಿದ್ದು, ಅದರಲ್ಲಿ ನಾಗರಾಜ್ ಬಿನ್ ಲೇಟ್ ಲಿಂಗಪ್ಪ ಎಂದು ನಮೂದಿಸಿರುವುದು ಕಂಡುಬರುತ್ತದೆ. ಅಸಲು ದಾವಾ ನಂ.32/2016ರಲ್ಲಿ

ಈ ಪ್ರಕರಣದ ಪ್ರತಿವಾದಿಯು ವಾದಿಯನ್ನು ಸೇರಿದಂತೆ ಇತರರನ್ನು ಪಕ್ಷಗಾರರನ್ನಾಗಿ ಮಾಡಿ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗವನ್ನು ಮಾಡಬೇಕಾಗಿ ಪ್ರಾರ್ಥಿಸಿ ದಾವೆಯನ್ನು ಹೂಡಿರುತ್ತಾರೆ.

24. ಮುಂದುವರೆದು ಈ ಪ್ರಕರಣದಲ್ಲಿ ಪ್ರತಿವಾದಿ ಪರ ವಕೀಲರು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳು ಈ ಕೆಳಗಿನಂತೆ ಇರುತ್ತವೆ. ಪ್ರತಿವಾದಿಗೆ ಸೇರಿದ ಶಾಲಾ ದೃಢೀಕರಣಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಪ್ರತಿವಾದಿಯ ಜನ್ಮ ದಿನಾಂಕವನ್ನು ದಿಃ15-12-1975 ಎಂದು ನಮೂದಿಸಿದ್ದು ಪ್ರವೇಶ ಸಂಖ್ಯೆ:982 ಎಂದು ತೋರಿಸಿದ್ದು, ವ್ಯಾಸಂಗ ಮಾಡಿದ ವರ್ಷವನ್ನು 82-83 ಎಂದು ನಮೂದಿಸಿರುತ್ತಾರೆ. ಮುಂದುವರೆದು ಹೆಬ್ಬೆ ಗ್ರಾಮದ ಮಂಡಲಪಂಚಾಯಿತ್ತಿಗೆ ಸೇರಿದ ಬೇಡಿಕೆ ಖಾತೆಯನ್ನು ಹಾಜರುಪಡಿಸಿದ್ದು ಅದರಲ್ಲಿ ಭದ್ರಮ್ಮ ಕೋಂ ಸಿದ್ದರಾಮಯ್ಯ ಎಂದು ನಮೂದಿಸಿರುತ್ತಾರೆ. ಮುಂದುವರೆದು 1999-2000ನೇ ಸಾಲಿಗೆ ಸಂಬಂಧಿಸಿದಂತೆ ಹೆಬ್ಬೆ ಗ್ರಾಮದಲ್ಲಿ ಭದ್ರಮ್ಮ ಕೋಂ ಸಿದ್ರಾಮಯ್ಯ ಇವರು ನಮೂದಿಸಿರುವ ದಾಖಲೆಯನ್ನು ಕಾಣಬಹುದಾಗಿದೆ. ಅಂತೆಯೇ ಮುಂದುವರೆದು ಹೆಬ್ಬೆ ಗ್ರಾಮ ಹಾಗೂ ಇತರ ಗ್ರಾಮಕ್ಕೆ ಸಂಬಂಧಿಸಿದಂತೆ ಭೂ ಸ್ವಾಧೀನ ಅಡಿಯಲ್ಲಿ ಸ್ವತ್ತನ್ನು ತೆಗೆದುಕೊಂಡ ಬಗ್ಗೆ ತಹಶೀಲ್ದಾರ್‌ರವರಿಗೆ ನೀಡಿರುವ ಪತ್ರವನ್ನು ಹಾಜರುಪಡಿಸಿರುತ್ತಾರೆ. ಅಂತೆಯೇ ಮುಂದುವರೆದು ತರೀಕೆರೆ ಪೊಲೀಸ್ ಎಂ.ಸಿ.ಹಳ್ಳಿ ಸರ್ವೆ ನಂ.152, 15 ಗುಂಟೆ ಗದ್ದೆ ವಿಚಾರದಲ್ಲಿ ತೊಂದರೆ ನೀಡಿದ ಬಗ್ಗೆ ವಾದಿಯು ತರೀಕೆರೆ ಪೊಲೀಸ್‌ಠಾಣೆಗೆ ದೂರನ್ನು ಸಲ್ಲಿಸಿದ್ದು ಅವರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿರುತ್ತಾರೆ. ಅಂತೆಯೇ ದಿಃ27-01-2014ಕ್ಕೆ ಸಂಬಂಧಿಸಿದಂತೆ ಕರಾರುಪತ್ರವನ್ನು ಹಾಜರುಪಡಿಸಿರುತ್ತಾರೆ.

25. ಅಂತೆಯೇ ಮುಂದುವರೆದು ಛಾಯಾಚಿತ್ರಗಳು, ಪ್ರತಿವಾದಿಗೆ ಸೇರಿದ ಚುನಾವಣಾ ಗುರುತಿನ ಚೀಟಿ, ಹಾಗೂ ಆಹಾರ ನಾಗರೀಕ ಸರಬರಾಜು ಇಲಾಖೆಯವರು ನೀಡಿದ ಪಡಿತರ ಚೀಟಿಯನ್ನು ಹಾಜರುಪಡಿಸಿದ್ದು ಅವುಗಳು ಜೆರಾಕ್ಸ್ ಪ್ರತಿಗಳಾಗಿರುತ್ತವೆ. ಅಂತೆಯೇ

ಪ್ರತಿವಾದಿಯು 1998ನೇ ಸಾಲಿನ ಖಾತೆದಾರರ ಪಟ್ಟಿಯನ್ನು ಹಾಜರುಪಡಿಸಿದ್ದು ಇರುತ್ತದೆ. ತರೀಕೆರೆ ಪೊಲೀಸ್‌ಠಾಣೆಯಲ್ಲಿಯೂ ಪ್ರತಿವಾದಿಗೆ ಹಿಂಬರಹವನ್ನು ನೀಡಿದ್ದು, ಅದನ್ನು ಹಾಜರುಪಡಿಸಿರುತ್ತಾರೆ. ಅಂತೆಯೇ ದಾವಾ ಅನುಸೂಚಿತ ಎ ಸ್ವತ್ತಿಗೆ ಸಂಬಂಧಿಸಿದಂತೆ 1ನೇ ವಾದಿಯು ಮಾಡಿದ್ದಾನೆಂದು ಹೇಳಲಾಗಿರುವ ಜಮೀನಿನ ತಿಳುವಳಿ ಬೋಗ್ಯ ಪತ್ರವನ್ನು ಹಾಜರುಪಡಿಸಿದ್ದು ಅದು ಜೆರಾಕ್ಸ್ ಪ್ರತಿಯಾಗಿರುತ್ತದೆ. ಅಂತೆಯೇ ತಿಳುವಳಿ ಬೋಗ್ಯ ಪತ್ರದ ಪಕ್ಷಗಾರನೇ ಸತೀಶ್‌ಗೌಡ ಎಂದು ಹೇಳಲಾಗಿರುವ ಹೇಳಿಕೆಯನ್ನು ಹಾಜರುಪಡಿಸಿದ್ದು ಅದು ಕೂಡ ಜೆರಾಕ್ಸ್ ಪ್ರತಿಯಾಗಿರುತ್ತದೆ. ಮುಂದುವರೆದು ದಿ:29-07-2016ರಂದು ಮೆಮೋ ಸಲ್ಲಿಸಿ ಹೆಬ್ಬೆ ಗ್ರಾಮದ ಕ್ರಮ ಸಂಖ್ಯೆ:217 ರಿಂದ 251ರವರೆಗೆ ಹಾಜರುಪಡಿಸಿದ್ದು ಅದರಲ್ಲಿ ಕ್ರಮ ಸಂಖ್ಯೆ: 247ರಲ್ಲಿ 1ನೇ ವಾದಿಯ ಹೆಸರನ್ನು ತೋರಿಸಿದ್ದು ಕ್ರಮ ಸಂಖ್ಯೆ:4(ಎ)ರಲ್ಲಿ 1ನೇ ವಾದಿ ಇರುತ್ತಾರೆ, 4(ಸಿ) ಯಲ್ಲಿ ಹೆಬ್ಬೆ ಗ್ರಾಮ ಎಂದು, ಕ್ರಮ ಸಂಖ್ಯೆ:4(ಡಿ)ಯಲ್ಲಿ ಭದ್ರಮ್ಮ ತಾಯಿ, ಶಂಕರ ತಮ್ಮ ಮತ್ತು ಮೀನಾಕ್ಷಿ ಹೆಂಡತಿ ಎಂದು ನಮೂದಿಸಿರುತ್ತದೆ. ಈ ಪತ್ರವು ಜೆರಾಕ್ಸ್ ಪ್ರತಿಯಾಗಿರುತ್ತದೆ.

26. ಅಂತೆಯೇ ಮುಂದುವರೆದು ದಿ:02-08-2015ರಂದು ಪ್ರತಿವಾದಿಯು ಮುಂದುವರೆದು ವಾದಿಯ ವಿರುದ್ದ ದಿ:02-08-2015 ರಂದು ತರೀಕೆರೆ ಪೊಲೀಸ್‌ಠಾಣೆಯಲ್ಲಿ ದೂರಿನ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸತೀಶ್‌ಗೌಡ ಬಿನ್ ನಾಗಪ್ಪ ಗೌಡ ಎಂಬುವವರ ಹೇಳಿಕೆಯನ್ನು ಹಾಜರುಪಡಿಸಿದ್ದು ಅಂತೆಯೇ ದೃಢೀಕೃತ ಕರಾರುಪತ್ರವನ್ನು ಹಾಜರುಪಡಿಸಿದ್ದು ಅದರ ಕುರಿತಾಗಿ ಅರ್ಜಿ ಸಂಖ್ಯೆ:3 ತರೀಕೆರೆ ಪೊಲೀಸ್‌ಠಾಣೆಯಲ್ಲಿ ಅಧಿಕಾರಿಗಳು ಹಿಂಬರಹವನ್ನು ನೀಡಿದ್ದು ಅದರಲ್ಲಿ ವಾದಿಯು ಪ್ರತಿವಾದಿಗೆ 15 ಗುಂಟೆ ಜಮೀನನ್ನು ಉಳುಮೆ ಮಾಡಲು ತಕರಾರನ್ನು ಮಾಡಿರುವುದು ಕಾಣುತ್ತದೆ. ಜಮೀನು ಸಾಗುವಳಿ ತಿಳುವಳಿಯಲ್ಲಿ ದೃಢೀಕೃತ ನಕಲನ್ನು ಕೂಡ ಹಾಜರುಪಡಿಸಿರುತ್ತಾರೆ. ಈ ಪ್ರಕರಣದಲ್ಲಿ 1ನೇ ವಾದಿ ಹಾಗೂ ಪ್ರತಿವಾದಿ ಅಣ್ಣತಮ್ಮಂದಿರು

ಎಂದು ಹಾಗೂ ಇಬ್ಬರ ಪೋಷಕರು ಬಹಳ ಹಿಂದೆಯೇ ನಿಧನರಾಗಿದ್ದು, ಭದ್ರಮ್ಮ ಎಂಬುವವರು 1ನೇ ವಾದಿ ಮತ್ತು ಪ್ರತಿವಾದಿಯ ಅಜ್ಜಿ ಎಂಬುದನ್ನು ಒಪ್ಪಿಕೊಂಡಿರುತ್ತಾರೆ.

27. ಈ ಪ್ರಕರಣದಲ್ಲಿ ವಾದಿಯು ದಾವಾ ಆಸ್ತಿಯು ತನಗೆ ಕಂದಾಯ ಇಲಾಖೆಯಿಂದ ನನ್ನ ಹೆಸರಿಗೆ ನೀಡಿರುವುದರಿಂದ ಅದು ನನ್ನ ಸ್ವಯಾರ್ಜಿತ ಆಸ್ತಿ ಎಂದು ಈ ಆಸ್ತಿಯನ್ನು ನಾನು ಹಕ್ಕಿನಿಂದ ಪಡೆದಿದ್ದು, ಭದ್ರಮ್ಮನವರ ವಾರಸುದಾರಿಕೆಯ ಆಧಾರದ ಮೇಲೆ ಪಡೆದಿರುವುದಿಲ್ಲವೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ. ಮುಂದುವರೆದು ತನ್ನ ವಾದಕ್ಕೆ ಪೂರಕವಾಗಿ ಹಾಜರುಪಡಿಸಿರುವ ದಾಖಲೆಯಲ್ಲಿ ಭದ್ರಮ್ಮನವರ ವಾರಸುದಾರರಾದ ರತ್ನ ಬಿನ್ ಸಿದ್ದಪ್ಪ, ಶಂಕ್ರಯ್ಯ ಬಿನ್ ಲಿಂಗಪ್ಪ, ರಂಗಪ್ಪ ಬಿನ್ ಸಿದ್ರಾಮಯ್ಯ ಇವರಿಗೆ ಪ್ರತ್ಯೇಕವಾಗಿ ಕಂದಾಯ ಇಲಾಖೆಯಿಂದ ಸ್ವತ್ತನ್ನು ಮಂಜೂರು ಮಾಡಿರುತ್ತಾರೆಂದು ಹೇಳಿರುತ್ತಾರೆ. ಮುಂದುವರೆದು ತನ್ನ ವಾದಕ್ಕೆ ಪೂರಕವಾಗಿ ತಾನೇ ಈ ಆಸ್ತಿಯಲ್ಲಿ ಸ್ವಾಧೀನತೆಯನ್ನು ಹೊಂದಿರುವುದರಿಂದ ಆ ಕುರಿತಾಗಿ ದಾಖಲೆಗಳನ್ನು ಹಾಜರುಪಡಿಸಿದ್ದು ತಾನು ಸ್ವತ್ತಿನ ಸ್ವಾಧೀನತೆಯನ್ನು ಹೊಂದಿದ್ದು ರುಜುವಾತುಪಡಿಸಬಹುದಾಗಿದೆ ಎಂದು ವಾದವನ್ನು ಮಂಡಿಸಲಾಯಿತು.

28. ಮುಂದುವರೆದು ಪ್ರತಿವಾದಿಯು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ತನ್ನನ್ನು ಪ್ರತಿವಾದಿಯನ್ನಾಗಿ ಮಾಡಿ ಅಸಲು ದಾವಾ ನಂ.32/2016ನ್ನು ಇದೇ ನ್ಯಾಯಾಲಯದಲ್ಲಿ ಹೂಡಿದ್ದು, ಅದರಲ್ಲಿ ದಾವಾ ಅನುಸೂಚಿತ ಸ್ವತ್ತಿನಲ್ಲಿ ತನಗೆ ಪಾಲು ಬರಬಹುದು ಎಂದು ಹೇಳಿರುತ್ತಾರೆ. ಮುಂದುವರೆದು ತಾನು ಈ ದಾವೆಯನ್ನು ಹೂಡುವ ದಿನದವರೆಗೂ ಹಾಗೂ ನಂತರದಲ್ಲಿಯೂ ದಾವಾ ಅನುಸೂಚಿತ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿದ್ದು, ಒಂದೊಮ್ಮೆ ಪ್ರತಿವಾದಿಯು ಅಸಲು ದಾವಾ ಸಂಖ್ಯೆ:32/2016ರಲ್ಲಿ ತನ್ನ ಪರವಾಗಿ ತೀರ್ಪನ್ನು ಪಡೆದಲ್ಲಿ ತಾನು ದಾವಾ ಅನುಸೂಚಿತ ಸ್ವತ್ತಿನಲ್ಲಿ ಪ್ರತಿವಾದಿಗೆ ಸೇರಬೇಕಾದ ಪಾಲನ್ನು ನೀಡಲು ಸದಾ ಸಿದ್ದನಾಗಿರುವುದಾಗಿ ಹೇಳಿರುತ್ತಾರೆ. ಮುಂದುವರೆದು ದಾವಾ ಅನುಸೂಚಿತ ಸ್ವತ್ತನ್ನು

ಹೊರತುಪಡಿಸಿ ತನಗೆ ವಾಸಿಸಲು ಬೇರೆ ಯಾವುದೇ ಮನೆ ಇಲ್ಲವೆಂದು ನುಡಿದಿರುತ್ತಾರೆ. ಅಂತೆಯೇ ಈ ಪ್ರಕರಣದಲ್ಲಿ ಪ್ರತಿವಾದಿ ಪರ ವಕೀಲರು ನ್ಯಾಯಾಲಯದ ಮುಂದೆ ವಾದವನ್ನು ಮಂಡಿಸುವ ಸಮಯದಲ್ಲಿ ಈ ದಾವಾ ಅನುಸೂಚಿತ ಸ್ವತ್ತು ತನ್ನ ಅಜ್ಜಿಗೆ ಸೇರಿದ್ದು, ನಮ್ಮಿಬ್ಬರನ್ನು ನಮ್ಮ ತಂದೆ ತಾಯಿಗಳ ಮರಣದ ನಂತರ ನಮ್ಮ ಅಜ್ಜಿಯೇ ಪೋಷಣೆ ಮಾಡಿರುವುದರಿಂದ ನಮ್ಮಿಬ್ಬರಿಗೂ ಕೂಡ ದಾವಾ ಅನುಸೂಚಿತ ಸ್ವತ್ತಿನಲ್ಲಿ ಸಮಾನ ಪಾಲು ಇದೆ ಎಂದು, ಆದ್ದರಿಂದ ಆ ಕುರಿತಾಗಿ ತಾನು ಹಕ್ಕು ಉಳ್ಳವನು ಎಂದು ನುಡಿದಿರುತ್ತಾರೆ. ಮುಂದುವರೆದು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ವಾದಿಯು ಬೇರೆಯವರಿಗೆ ಬೋಗ್ಯದ ಕರಾರನ್ನು ನೀಡಿದ್ದು, ಹಾಗೂ ಅದನ್ನು ಮಾರಾಟ ಮಾಡಲು ಪ್ರಯತ್ನಿಸಿದ್ದು, ಮಾರಾಟ ಮಾಡಿದಲ್ಲಿ ಪ್ರತಿವಾದಿಗೆ ತುಂಬಾ ತೊಂದರೆ ಉಂಟಾಗುತ್ತದೆ ಎಂದು ತನ್ನ ವಾದವನ್ನು ಮಂಡಿಸಿರುತ್ತಾರೆ.

29. ಅಲ್ಲದೆಯೇ ತಾನೂ ಕೂಡ ಭದ್ರಮ್ಮನವರ ವಾರಸುದಾರರಿಗೆ ಆಸ್ತಿಯಲ್ಲಿ ಹಕ್ಕು ಉಳ್ಳವರಾಗಿರುತ್ತಾರೆಂದು, ಆದಕಾರಣದಿಂದ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಪೊಲೀಸ್‌ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದು ಪೊಲೀಸ್‌ಠಾಣೆಯಲ್ಲಿ ಒಪ್ಪಿಕೊಂಡ ಮೇರೆಗೆ 15 ಗುಂಟೆ ಜಮೀನಿನ ಸ್ವಾಧೀನದಲ್ಲಿ ತಾನು ಇದ್ದೇನೆ ಎಂದು ವಾದವನ್ನು ಮಂಡಿಸಿರುತ್ತಾರೆ. ಪ್ರತಿವಾದಿಯರ ವಾದಕ್ಕೆ ಉತ್ತರ ರೂಪದಲ್ಲಿ ವಾದವನ್ನು ಮಂಡಿಸುವ ಸಮಯದಲ್ಲಿ ವಾದಿ ಪರ ವಕೀಲರು ತಾನು ದಾವಾ ಅನುಸೂಚಿತ ಸ್ವತ್ತನ್ನು ಯಾರಿಗೇ ಆಗಲೀ ಬೋಗ್ಯಕ್ಕೆ ಕೊಡುವುದಿಲ್ಲವೆಂದು, ಮುಂದುವರೆದು ದಾವಾ ಅನುಸೂಚಿತ ಸ್ವತ್ತನ್ನು ಯಾರಿಗೂ ಮಾರಾಟ ಮಾಡಿರುವುದಿಲ್ಲವೆಂದು, ಆ ಕುರಿತಾಗಿ ನ್ಯಾಯಾಲಯದಲ್ಲಿ ತಾನು ಪ್ರಮಾಣಪತ್ರವನ್ನು ಸಲ್ಲಿಸಲು ಸಿದ್ದನು ಎನ್ನುವುದಾಗಿ ವಾದವನ್ನು ಮಂಡಿಸಿರುತ್ತಾರೆ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ದಾವಾ ಅನುಸೂಚಿತ ಬಿ ಸ್ವತ್ತಿಗೆ ಸಂಬಂಧಿಸಿದಂತೆ ಈ ಪ್ರಕರಣ ಮುಗಿಯುವವರೆಗೂ ತಾತ್ಕಾಲಿಕ ನಿರ್ಭಂಧಕಾಜ್ಞೆ ನೀಡಬೇಕಾಗಿದೆ.

30. ಪ್ರತಿವಾದಿ ಪರ ವಕೀಲರು ವಾದವನ್ನು ಮಂಡಿಸುವ ಸಮಯದಲ್ಲಿ ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪಾದ ***2009(2) ಕೆ.ಸಿ.ಸಿ.ಆರ್. ಎನ್.ಎನ್. 44 ಮುನಿಯಪ್ಪ ವಿರುದ್ದ ಕೆಂಡಮ್ಮ*** ಮತ್ತು ಇತರರು ಪ್ರಕರಣದ ತೀರ್ಪನ್ನು ಹಾಜರುಪಡಿಸಿರುತ್ತಾರೆ. ಆದರೆ ಈ ತೀರ್ಪಿನ ಅಂಶವು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸುವುದಿಲ್ಲ.

31.ಮುಂದುವರೆದು ದಾವಾ ಅನುಸೂಚಿತ ಎ ಸ್ವತ್ತಿಗೆ ಸಂಬಂಧಿಸಿದಂತೆ ಈ ಪ್ರಕರಣ ಮುಗಿಯುವವರೆಗೂ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಿದ್ದು, ಆದರೆ ವಾದಿಯು ದಾವಾ ಅನುಸೂಚಿತ ಸ್ವತ್ತನ್ನು ಈ ಪ್ರಕರಣ ಮುಗಿಯುವವರೆಗೂ ಯಾರಿಗೇ ಅಗಲೀ ಮಾರಾಟ ಮಾಡುವಂತಿಲ್ಲವೆಂದು, ಆ ಕುರಿತಾಗಿ ತಾನು ಅದೇ ರೀತಿಯಲ್ಲಿ ನಡೆದುಕೊಳ್ಳುತ್ತೇನೆಂದು ಪ್ರಮಾಣಪತ್ರವನ್ನು ಸಲ್ಲಿಸುವಂತೆ ನಿರ್ದೇಶನವನ್ನು ನೀಡಲಾಗಿದೆ.

32. ಈ ಮೇಲ್ಕಂಡ ಎಲ್ಲ ಅಂಶಗಳನ್ನು ಪರಿಗಣಿಸಿದಾಗ, ವಾದಿಯು ಈ ದಾವೆಯಲ್ಲಿ ತನ್ನ ಪರವಾಗಿ ಮೇಲ್ನೋಟಕ್ಕೆ ಸಾಬೀತುಪಡಿಸುವ ಪ್ರಕರಣವನ್ನು ರುಜುವಾತುಪಡಿಸುವಲ್ಲಿ ಹಾಗೂ ತನ್ನ ಪರವಾಗಿ ಅನುಕೂಲತೆಯ ಸಮತೋಲನ ಹೊಂದಿದ್ದಾನೆಂದು ನಿರ್ಣಯಿಸಬಹುದು. ಅಲ್ಲದೆಯೇ ಈ ಪ್ರಕರಣದ ಎಲ್ಲಾ ಹೇಳಿಕೆಗಳೂ ಹಾಗೂ ದಾಖಲಾತಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡದಿದ್ದ ಪಕ್ಷದಲ್ಲಿ ವಾದಿಗೆ ತುಂಬಲಾರದ ನಷ್ಟವುಂಟಾಗುತ್ತದೆ ಎಂದು ಅಭಿಪ್ರಾಯಪಟ್ಟು ಆ ಮೇರೆಗೆ ಅಂಶ 1 ರಿಂದ 3ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

**33. ಅಂಶ-4:-** ಮೇಲ್ಕಾಣಿಸಿದ ಎಲ್ಲಾ ಕಾರಣಗಳ ಮೇಲಿಂದಾಗಿ ಈ ಕೆಳಕಾಣಿಸಿದಂತೆ ಆದೇಶ ಮಾಡಿರುತ್ತೇನೆ.

# ಆದೇಶ

ವಾದಿ/ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39, ನಿಯಮ 1 ಮತ್ತು 2 ಸಹವರ್ತಿ ಕಲಂ.151ರ ಅಡಿಯಲ್ಲಿ ಸಲ್ಲಿಸಿದಂತಹ ಮಧ್ಯಂತರ ಅರ್ಜಿ ನಂ.1 ನ್ನು ಪುರಸ್ಕರಿಸಲಾಗಿದೆ.

ವಾದಿಯು ದಾವಾ ಅನುಸೂಚಿತ ಎ ಮತ್ತು ಬಿ ಸ್ವತ್ತನ್ನು ಮಾರಾಟ ಮಾಡುವಂತಿಲ್ಲವೆಂದು ಷರತ್ತನ್ನು ವಿಧಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು, ಬೆರಳಚ್ಚು ಮಾಡಿದ ನಂತರ, ಓದಿ ತಿದ್ದಿ, ಪ್ರತಿ ತೆಗೆದು ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕಃ 10ನೇ ಆಗಸ್ಟ್ 2016 ರಂದು ನಾನು ಉದ್ಘೋಷಿಸಿದ್ದೇನೆ.)

(ರಘುರಾಮ ಎನ್.ಎಸ್.)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ತರೀಕೆರೆ.

ವಿದ್ಯಾ.